# ಸೋಜಿಗದ ಸಂಪಿಗೆ ಮರ



ಚಿತ್ರದಲ್ಲಿರುವ ಅನನ್ಯ ಸಂಪಿಗೆ ಮರ ಬೆಂಗಳೂರಿನ ಪಾಂಡುರಂಗ ನಗರ ಬಡಾವಣೆಯಲ್ಲಿದೆ. ಈ ಮರದಲ್ಲಿ ಎರಡು ಮುಖ್ಯ ಕವಲುಗಳಿವೆ. ಒಂದು ಕವಲಿನ ಕೊಂಬೆ– ರೆಂಬೆಗಳಲ್ಲಿ ಕೆಂಡ ಸಂಪಿಗೆ ಹೂಗಳು ಹಾಗೂ ಮತ್ತೊಂದರ ರೆಂಬೆಗಳಲ್ಲಿ ಹಳದಿ ಸಂಪಿಗೆ ಹೂಗಳನ್ನು ಅರಳಿಸುವ ಈ ಸೋಜಿಗದ ಸಂಪಿಗೆ ಮರ ಬೆರಗುಗೊಳಿಸುತ್ತದೆ. ಬಹುಶಃ ಒಟ್ಟಿಗೆ ನೆಟ್ಟ ಎರಡು ವಿಭಿನ್ನ ಮಾದರಿಯ ಸಸಿಗಳು ಬೆಳೆದಂತೆ ಒಂದೇ ಮರದ ಕವಲುಗಳಾಗಿ ಕಂಡುಬಂದು ಅಚ್ಚರಿಗೆ ಕಾರಣವಾಗಿರಬಹುದು!

**–ಮಂಜುನಾಥ ಡಿ.ಎಸ್., ಬೆಂಗಳೂರು**

# ಅರಸರ ಅರಮನೆ



ವಿಜಯನಗರ (ಹಂಪಿ)ಗೆ ಭೇಟಿ ನೀಡಿದ ಎಲ್ಲಾ ಪ್ರವಾಸಿಗಳ ಪ್ರಶ್ನೆ ಅರಮನೆಯೆಲ್ಲಿ? ಒಂದು ಕಾಲಕ್ಕೆ ಅದ್ಭುತ ವಾಸ್ತುಶೈಲಿ ಹೊಂದಿದ ಅರಮನೆಗಳು, ವೈಭವೋಪೇತ ದೇವಾಲಯಗಳು, ವಾಣಿಜ್ಯ ನಗರ ಸಂಕೀರ್ಣಗಳು, ರಾಣಿವಾಸದ ಬಿಡದಿಗಳ ಬಗ್ಗೆ ವಿದೇಶಿ ಪ್ರವಾಸಿಗರು ವರ್ಣಿಸಿರುವುದನ್ನು ಹಲವರು ಓದಿರಬಹುದು. ಸಾಮ್ರಾಜ್ಯದ ವೈಭವ ದೇಶ ವಿದೇಶದಲ್ಲಿ ಹೆಸರು ಮಾಡಿ ಇಂದಿಗೂ ಜನರನ್ನು ಆಕರ್ಷಿಸುತ್ತಿದೆ.

ಆದರೆ 1565ರ ರಕ್ಕಸ ತಂಗಡಿ ಯುದ್ಧ ನಡೆದು ಸಾಮ್ರಾಜ್ಯ ಮಣ್ಣು ಪಾಲಾಯಿತು. ಅರಮನೆಗಳು ಕೆಡವಲ್ಪಟ್ಟವು, (ಈಗಲೂ ಅರಮನೆ ಅವಶೇಷ ಹಜಾರ ರಾಮ ದೇವಾಲಯದ ಸಂಕೀರ್ಣದಲ್ಲಿದೆ. ಅದು ಶಿಥಿಲಾವಸ್ಥೆಯಲ್ಲಿರುವ ಬುನಾದಿ). ರಾಜವಂಶದವರು ಜರ್ಝರಿತರಾಗಿ ಜೀವ ಭಯದಿಂದ ಅಳಿದುಳಿದ ನಗ ನಾಣ್ಯದೊಂದಿಗೆ ಚಂದ್ರಗಿರಿ ಅರಮನೆಗೆ ಬಂದು ಸೇರುತ್ತಾರೆ. ಅದೇ ಈ ಅರಮನೆ. ಅಂತಸ್ತುಗಳ ಅಖಂಡ ಗವಾಕ್ಷಿಗಳು, ಮೇಲುಗೋಪುರದ ಇಟ್ಟಿಗೆ ಮತ್ತು ನಯಗಾರೆಯಿಂದ ನಾಜೂಕಾಗಿ, ಸುಂದರವಾಗಿ ನಿರ್ಮಿಸಲಾಗಿದೆ. ಇದು ತಿರುಪತಿ ಸಮೀಪದಲ್ಲಿದೆ. ಅರವೀಡು ವಂಶದ ದೊರೆಗಳು ಬಹುಕಾಲ ಇಲ್ಲಿಂದಲೇ ರಾಜ್ಯಭಾರ ಮಾಡಿದರು ಎಂಬ ಐತಿಹ್ಯ ಇದೆ. ಈಗ ಈ ಅರಮನೆ ಭಾರತೀಯ ಪುರಾತತ್ವ ಇಲಾಖೆಗೆ ಸೇರಿದೆ.

**–ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ**

# ಮೆಕ್ಕೆಜೋಳದ ಮಹಾದ್ವಾರ




ಮೆಕ್ಕೆಜೋಳ ಬೆಳೆದ ರೈತ ಹನುಮಂತಪ್ಪ ಕುರುಡ್ಡವರ್ ಹೊಲದಲ್ಲಿ ಬೀಜದ ಕಂಪನಿಯೊಂದು ಮೆಕ್ಕೆಜೋಳದ ಕೃಷಿ ಕ್ಷೇತ್ರೋತ್ಸವ ಆಯೋಜಿಸಿತ್ತು. ಅದಕ್ಕಾಗಿ ಬರುವ ಅತಿಥಿಗಳು ಮತ್ತು ರೈತರನ್ನು ಸ್ವಾಗತಿಸುವುದಕ್ಕಾಗಿ ಜೋಳದ ತೆನೆಯಲ್ಲಿಯೇ ನಿರ್ಮಿಸಿದ ಆಕರ್ಷಕ ದ್ವಾರವಿದು. ಮಹಾ ದ್ವಾರದ ಜೊತೆಗೆ ಹೊಲದೊಳಗೆ ಹೋಗಲು ಎರಡೂ ಬದಿಗೆ ತೆನೆಯ ಚಿಕ್ಕ ಬಾಗಿಲುಗಳನ್ನೂ ಸಹ ಮಾಡಲಾಗಿತ್ತು. ಹಾವೇರಿ ಜಿಲ್ಲೆ ಹಾನಗಲ್ಲ ತಾಲ್ಲೂಕಿನ ಮಕರವಳ್ಳಿ ಗ್ರಾಮದ (ಶಿವಮೊಗ್ಗ–ಹುಬ್ಬಳ್ಳಿ ಹೆದ್ದಾರಿ ಪಕ್ಕದಲ್ಲಿ) ರೈತ ಹನುಮಂತಪ್ಪ ಕುರುಡ್ಡವರ್ ಹೊಲದಲ್ಲಿ ಇದನ್ನು ನಿರ್ಮಿಸಲಾಗಿತ್ತು. ಕ್ಷೇತ್ರೋತ್ಸವಕ್ಕೆ ಬಂದವರೆಲ್ಲಾ ಬೆಳೆದ ಜೋಳದ ಜೊತೆಗೆ ಸುಮಾರು ಮುನ್ನೂರೈವತ್ತಕ್ಕೂ ಹೆಚ್ಚು ಜೋಳದ ತೆನೆಗಳಿಂದ ನಿರ್ಮಿಸಿದ ಮಹಾದ್ವಾರಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು.

**–ಹೆಚ್.ಜಿ.ಅರುಣ್‌ಕುಮಾರ್ ಹುರುಳಿ, ಸೊರಬ**